ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಹಾಸನ ವಿಭಾಗ, ಹಾಸನ.

ಅರಣ್ಯ ಇಲಾಖೆ

ಅರಣ್ಯ ಭವನ, ಡೈರಿ ಸರ್ಕಲ್,
ಬಿ. ಎಂ. ರಸ್ತೆ, ಹಾಸನ-573 201.
ದೂರವಾಣಿ & ಫ್ಯಾಕ್ಸ್ : 08172-268296
ಈಮೈಲ್ : dcfhassan@yahoo.in
dcfhsn@aranya.gov.in

ಸಂಖ್ಯೆ: ಎ4/ಎಫ್‌ಸಿಎ/ಎತ್ತಿನಹೊಳೆ/ವಿವ-2/2016-17 ದಿನಾಂಕ : 11.09.2016

## ಅಧಿಕೃತ ಜ್ಞಾಪನ ಪತ್ರ

ವಿಷಯ : ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಸಕಲೇಶಪುರ ವಲಯದಲ್ಲಿ ಬಿಡುಗಡೆ ಮಾಡುತ್ತಿರುವ 13.93 ಹೆಕ್ಟೇರು ವಿವಿಧ ವರ್ಗದ ಅರಣ್ಯ ಪ್ರದೇಶಗಳಲ್ಲಿರುವ ಮರಗಳನ್ನು ಕಡಿದು ಸರ್ಕಾರಿ ನಾಟಾ ಸಂಗ್ರಹಾಲಯ, ಹಾಸನಕ್ಕೆ ಸಾಗಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ :
1. Letter F. No. 4-KRC-1064/ 2015-BAN/ 7829, dated 06.01.2016 of the Government of India, Ministry of Environment, Forests & Climate Change, Regional Office, (Southern Zone), Bengaluru.
2. Letter No. A5(2)/ GFL/ CR-15/ 2013-14, dated 29.01.2016 of the Principal Chief Conservator of Forests (HoFF), Bengaluru.
3. Letter No. EE/ KNNL/ YPD-1/ AS/ Bill/ 2016-17, 822, dated 31.08.2016 of the Executive Engineer, Yettinahole Drinking Water Project Division No.1, Sakleshpur.
4. Letter No. SKP/ RFO/ Yettina/ GL-3081/ 2014-15, dated 18.05.2015 of the Range Forest Officer, Sakleshpur Range, Sakleshpur.
5. Letter No. ACF/ SKP/ Yettinahole/ CR-29/ 2015-16, 164 of the Asst. Conservator of Forests, Sakeshpur Sub-Division, Sakleshpur.

@@@

ಪ್ರಸ್ತಾವನೆ:-

ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಎತ್ತಿನಹೊಳೆ ಯೋಜನಾ ವಿಭಾಗ-1, ಸಕಲೇಶಪುರ, ಇವರಿಗೆ ಸಕಲೇಶಪುರ ತಾಲ್ಲೂಕು ವ್ಯಾಪ್ತಿಯಲ್ಲಿ ವಿವಿಧ ವರ್ಗದ ಅಧಿಸೂಚಿತ 13.93 ಹೆಕ್ಟೇರು ಅರಣ್ಯ ಪ್ರದೇಶವನ್ನು ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗಾಗಿ (Diversion) ಬಿಡುಗಡೆ ಮಾಡಲು ಉಲ್ಲೇಖ (1)ರ ಕೇಂದ್ರ ಸರ್ಕಾರದ ಆದೇಶದಲ್ಲಿ Stage-I ಮೊದಲ ಹಂತದ ತಾತ್ವಿಕ ಮಂಜೂರಾತಿ ನೀಡಲಾಗಿದೆ. ಉಪಯೋಗಿ ಸಂಸ್ಥೆ **ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಎತ್ತಿನಹೊಳೆ ಯೋಜನಾ ವಿಭಾಗ-1, ಸಕಲೇಶಪುರ,**ರವರು ಬಿಡುಗಡೆ ಮಾಡಲಾಗುವ 13.93 ಹೆಕ್ಟೇರು ಅರಣ್ಯ ಭೂಮಿಯಲ್ಲಿ ಕಾಮಗಾರಿ ಕೈಗೊಳ್ಳಲು ಸದರಿ ಪ್ರದೇಶದಲ್ಲಿ ಬರುವ ಮರಗಳನ್ನು ಕಡಿದು ಸಾಗಿಸಿಕೊಳ್ಳಲು ತಗಲುವ ವೆಚ್ಚವನ್ನು ಭರಿಸಿರುತ್ತಾರೆ. ವಲಯ ಅರಣ್ಯ ಅಧಿಕಾರಿ, ಸಕಲೇಶಪುರ,ರವರಿಂದ ಯೋಜನಾ

ವಿಸ್ತೀರ್ಣದಲ್ಲಿ ಬರುವ ಮರಗಳ ಕುರಿತು ವರದಿಯನ್ನು ಪಡೆಯಲಾಗಿ, ಕಾಂಪೋನೆಂಟ್‌ವೈಸ್ ವಿಸ್ತೀರ್ಣದಲ್ಲಿ ಬರುವ 0.30 ಸೆಂ.ಮೀ.ಗಿಂತ ಹೆಚ್ಚು ಗಾತ್ರದ **ಕಾಡುಜಾತಿ/ಮನ್ನಾಜಾತಿ ಒಟ್ಟು 4,995 ಹಾಗೂ 1,332 ಬಿದಿರುಗಳ** ಎಣಿಕೆ ಪಟ್ಟಿಯನ್ನು ತಯಾರಿಸಿ ದೃಢೀಕರಿಸಿ ಉಲ್ಲೇಖ (4) & (5)ರಲ್ಲಿ ಸಲ್ಲಿಸಿರುತ್ತಾರೆ. ಸಮಗ್ರ ಕುಡಿಯುವ ನೀರಿನ ಯೋಜನೆ ಕಾಮಗಾರಿ ಅನುಷ್ಠಾನಗೊಳಿಸಲು ಅರಣ್ಯ ಪ್ರದೇಶದಲ್ಲಿ ಬರುವ ಮರಗಳನ್ನು ಇಲಾಖಾ ವತಿಯಿಂದ ಕಡಿದು ಸರ್ಕಾರಿ ನಾಟಾ ಸಂಗ್ರಹಾಲಯಕ್ಕೆ ಸಾಗಾಣಿಕೆ ಮಾಡಬೇಕಿರುತ್ತದೆ. ವಲಯ ಅರಣ್ಯ ಅಧಿಕಾರಿ, ಸಕಲೇಶಪುರ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಕಲೇಶಪುರ ಉಪ ವಿಭಾಗ, ಸಕಲೇಶಪುರ,ರವರ ವರದಿ ಹಾಗೂ ಶಿಫಾರಸ್ಸಿನ ಮೇರೆಗೆ 13.93 ಹೆಕ್ಟೇರು ಅರಣ್ಯ ಪ್ರದೇಶದಲ್ಲಿ ಬರುವ ಮರಗಳನ್ನು ಇಲಾಖಾ ಉಸ್ತುವಾರಿಯಲ್ಲಿ ಕಡಿದು ಹಾಸನದ ಸರ್ಕಾರಿ ನಾಟಾ ಸಂಗ್ರಹಾಲಯಕ್ಕೆ ಸಾಗಿಸಲು ಕೆಳಕಂಡಂತೆ ಆದೇಶ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಎತ್ತಿನಹೊಳೆ ಯೋಜನಾ ವಿಭಾಗ-1, ಸಕಲೇಶಪುರ, ಇವರಿಗೆ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗಾಗಿ ಸಕಲೇಶಪುರ ವಲಯದಲ್ಲಿ (Diversion) ಬಿಡುಗಡೆ ಮಾಡಲಾಗುವ ಅಧಿಸೂಚಿತ 13.93 ಹೆಕ್ಟೇರು ಅರಣ್ಯ ಪ್ರದೇಶದಲ್ಲಿ ಬರುವ ಕೆಳಕಂಡ ಕಾಡು/ಮನ್ನಾಜಾತಿ ಹಾಗೂ ಬಿದಿರುಗಳನ್ನು ಇಲಾಖಾ ಉಸ್ತುವಾರಿಯಲ್ಲಿ ಕಡಿದು ಹಾಸನದ ಸರ್ಕಾರಿ ನಾಟಾ ಸಂಗ್ರಹಾಲಯಕ್ಕೆ ಸಾಗಾಣಿಕೆ ಮಾಡಲು ಷರತ್ತುಗಳಿಗೊಳಪಟ್ಟು ಅನುಮತಿ ನೀಡಿದೆ.

**(30 cm and above GBH)**

| Sl. No. | Village | Type of Forest and Extent (in Ha.) | Survey No. | No. of trees | Timber/ Firewood in Cum | No. of Bamboos |
|---|---|---|---|---|---|---|
| 1 | Doddanagara | Reserve Forest (0.96) | 45 | 449 | 8.277 | - |
| 2 | Kadumane | Section-4 (0.80) | 76 | 139 | 20.884 | - |
| 3 | Kadumane | Section-4 (2.72) | 68 | 872 | 119.056 | - |
| 4 | Kadumane | Deemed Forest (3.11) | 88 | 2,091 | 171.911 | 481 |
| 5 | Nadahalli | Section-4 (0.56) | 197 | 284 | 25.482 | 27 |
| 6 | Nadahalli | Deemed Forest (0.82) | 196 | 359 | 16.854 | 555 |
| 7 | Aluvalli | Deemed Forest (0.75) | 47 | 83 | 36.323 | - |
| 8 | Aluvalli | Deemed Forest (1.15) | 24 | 24 | 8.081 | - |
| 9 | Kadagarahalli Coffee Estate | Reserve Forest (0.89) | 1 | 125 | 56.901 | - |
| 10 | Heggadde | Section-4 (2.17) | 385 | 569 | 37.372 | 269 |
| | **Total** | **13.93** | | **4,995** | **501.141** | **1,332** |

## ಷರತ್ತುಗಳು

1) ಕಡಿಯಲು ಗುರುತಿಸಿರುವ ಮರಗಳನ್ನು ಮಾತ್ರ ಕಡಿದು ತಯಾರಿಸಿದ ನಾಟಾ/ಸೌದೆಯ ಅಳತೆಯ ಪಟ್ಟಿಯನ್ನು ಕೆಳಸಹಿದಾರರಿಂದ ದೃಢೀಕರಿಸಿಕೊಂಡ ನಂತರ ಸರ್ಕಾರಿ ನಾಟಾ ಸಂಗ್ರಹಾಲಯಕ್ಕೆ ಸಾಗಾಣಿಕೆ ಮಾಡುವುದು.

2) ಅನುಮತಿ ನೀಡದೇ ಇರುವ ಯಾವುದೇ ಮರಗಳ ಕಡಿತಲೆಯನ್ನು ನಿಷೇಧಿಸಿದೆ.

3) ಮರಗಳ ಕಡಿತಲೆ ಮತ್ತು ಸಾಗಾಣಿಕೆ ಸಮಯದಲ್ಲಿ ಯಾವುದೇ ವಿಧದ ಅಕ್ರಮ ನಡೆಯದಂತೆ ವಲಯ ಅರಣ್ಯ ಅಧಿಕಾರಿ ಮತ್ತು ಸಿಬ್ಬಂದಿಗಳು ಸೂಕ್ತ ಮುನ್ನೆಚ್ಚರಿಕೆ ವಹಿಸುವುದು. ಒಂದು ಪಕ್ಷ ಯಾವುದೇ ಅಕ್ರಮ ನಡೆದಿರುವುದು ಕಂಡುಬಂದಲ್ಲಿ ಸಂಬಂಧಿಸಿದವರೇ ನೇರ ಜವಾಬ್ದಾರರಾಗಿರುತ್ತಾರೆ.

4) ಮರಗಳನ್ನು ಕಡಿತಲೆ ಮಾಡಿ ಸಾಗಾಣಿಕೆ ಮಾಡುವವರೆಗೆ ಶಾಖೆಯ ಉಪ ವಲಯ ಅರಣ್ಯ ಅಧಿಕಾರಿ ಮತ್ತು ಅರಣ್ಯ ರಕ್ಷಕರು ಪೂರ್ಣ ಜವಾಬ್ದಾರಿವಹಿಸತಕ್ಕದ್ದು. ಈ ಕುರಿತು ರಿಜಿಸ್ಟರಿನಲ್ಲಿ ಮರಗಳ ಸಂಖ್ಯೆ, ತಯಾರಿಸಲಾದ ನಾಟಾ/ಸೌದೆಯ ವಿವರಗಳನ್ನು ನಮೂದಿಸತಕ್ಕದ್ದು.

5) ಮರಗಳನ್ನು ಕಡಿತಲೆ ಮಾಡಿ ಹಾಸನ ಸರ್ಕಾರಿ ನಾಟಾ ಸಂಗ್ರಹಾಲಯಕ್ಕೆ ಸಾಗಿಸಿ, ಡಿಪೋ ರಸೀದಿ ಪಡೆದು ವರದಿ ಸಲ್ಲಿಸುವುದು.

ವೃಕ್ಷ ಸಂರಕ್ಷಣಾಧಿಕಾರಿ &
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹಾಸನ ವಿಭಾಗ, ಹಾಸನ.

ಪ್ರತಿಯನ್ನು ಃ

1. ಮರಗಳ ಅಳತೆ ಪಟ್ಟಿಯೊಂದಿಗೆ ವಲಯ ಅರಣ್ಯ ಅಧಿಕಾರಿ, ಸಕಲೇಶಪುರ ವಲಯ,ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸುತ್ತಾ, ಮರಗಳನ್ನು ಕಡಿದ ನಂತರ ಈ ಕಛೇರಿಯಿಂದ ಆದೇಶ ಪಡೆದು ಸರ್ಕಾರಿ ನಾಟಾ ಸಂಗ್ರಹಾಲಯ, ಹಾಸನಕ್ಕೆ ಸಾಗಿಸಿ ಡಿಪೋ ರಶೀದಿಯಂದಿಗೆ ವರದಿ ಸಲ್ಲಿಸುವುದು. ಯಾವುದೇ ಅಕ್ರಮಗಳು ನಡೆಯದಂತೆ ಎಚ್ಚರಿಕೆ ವಹಿಸುವುದು.
2. **ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಕಲೇಶಪುರ,** ಇವರಿಗೆ ಕಳುಹಿಸುತ್ತಾ, ಸದರಿ ಮರಗಳ ಕಡಿತಲೆ ಮತ್ತು ಸಾಗಾಣಿಕೆ ಉಸ್ತುವಾರಿಯನ್ನು ವಹಿಸಲು ತಿಳಿಸಲಾಗಿದೆ.
3. **ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಎತ್ತಿನಹೊಳೆ ಯೋಜನಾ ವಿಭಾಗ-1, ಸಕಲೇಶಪುರ,**ರವರಿಗೆ ಮಾಹಿತಿ & ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
4. ಗೌರವಗಳೊಂದಿಗೆ, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಬೆಂಗಳೂರು,ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ಗೌರವಗಳೊಂದಿಗೆ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಹಾಸನ ವೃತ್ತ, ಹಾಸನ, ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.